ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-01.
ದೂರವಾಣಿ ಸಂಖ್ಯೆ : 080-22372738, E-mail: karnregs@gmail.com

ಸಂಖ್ಯೆ: ಗ್ರಾಅಪ 41 ಉಖಾಯೋ 2015

ದಿನಾಂಕ: 07-04-2016

## ಸುತ್ತೋಲೆ

**ವಿಷಯ:** ಕೇಂದ್ರ ಪುರಸ್ಕೃತ ಮಹಾತ್ಮ ಗಾಂಧಿ ನರೇಗಾ ಮತ್ತು ರಾಜ್ಯ ಸರ್ಕಾರದ ವಿಕಾಸ ಯೋಜನೆಗಳ ಒಗ್ಗೂಡಿಸುವಿಕೆ ಮೂಲಕ ಗ್ರಾಮಗಳ ಸಮಗ್ರ ಅಭಿವೃದ್ಧಿ ಕುರಿತು.

**ಉಲ್ಲೇಖ:**
1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಉಖಾಯೋ: ಕಾಯ್ದೆ 2005, ಕಾರ್ಯಾಚರಣೆ ಮಾರ್ಗಸೂಚಿ 2013 (ನಾಲ್ಕನೆಯ ಆವೃತ್ತಿ) ಮತ್ತು ಕಾಯ್ದೆಯ ಪರಿಷ್ಕೃತ ಅನುಸೂಚಿ I ಮತ್ತು II.
2. ಗ್ರಾಮ ವಿಕಾಸ ಮಾರ್ಗಸೂಚಿ
3. ನಿರ್ದೇಶಕರು (ಸುಗ್ರಾಯೋ) ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳ ಇವರ 07-04-2016 ರಂದು ಪಂಚಾಯತ್ ರಾಜ್ಯ ಸಂಸ್ಥೆ ಹಾಗೂ ಅನುಷ್ಠಾನ ಇಲಾಖೆಗಳಿಗೆ ಈ ಒಗ್ಗೂಡಿಸುವಿಕೆ ಕುರಿತು ನೀಡಲು ಕೋರಿದ ಎರಡು ಅನಧಿಕೃತ ಟಿಪ್ಪಣಿಗಳು.

~~~~~

189 ಗ್ರಾಮೀಣ ವಿಧಾನ ಸಭೆ ಕ್ಷೇತ್ರಗಳ 935 ಗ್ರಾಮಗಳಿಗೆ ಪ್ರತಿ ಗ್ರಾಮಕ್ಕೆ ರೂ 75.00 ಲಕ್ಷದಂತೆ ಅನುದಾನ ನಿಗದಿಪಡಿಸಿ, ಗ್ರಾಮಗಳ ಅಭಿವೃದ್ಧಿಗಾಗಿ ಗ್ರಾಮ ವಿಕಾಸ ಯೋಜನೆಯನ್ನು ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಉಲ್ಲೇಖ (4)ರ ಪ್ರಕಾರ ಸುತ್ತೋಲೆ/ಮಾರ್ಗಸೂಚಿ ಹೊರಡಿಸಿದೆ. ಗ್ರಾಮಗಳ ಪಟ್ಟಿಯೊಂದಿಗೆ ಸದರಿ ಮಾರ್ಗಸೂಚಿಗಳನ್ನು ಇದರೊಂದಿಗೆ ಸಿದ್ದ ಮಾಹಿತಿಗಾಗಿ ಲಗತ್ತಿಸಿದೆ.

ಗ್ರಾಮ ವಿಕಾಸ ಯೋಜನೆಯ ಅನುದಾನ ಹಾಗೂ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುದಾನ ಒಗ್ಗೂಡಿಸಿ ಈ 935 ಗ್ರಾಮಗಳ ಸಮಗ್ರ ಅಭಿವೃದ್ಧಿ ಕೈಗೊಳ್ಳಲು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು ದಿನಾಂಕ: 06-04-2016ರಂದು ನಡೆದ ಸಭೆಯಲ್ಲಿ ಸೂಚನೆ ನೀಡಿರುತ್ತಾರೆ.

ಮಹಾತ್ಮ ಗಾಂಧಿ ನರೇಗಾ ಕಾಯ್ದೆ ಹಾಗೂ ಮಾರ್ಗಸೂಚಿಗಳನ್ವಯ (ಸಂಧಾನ ಮಾಡಬಾರದ ವಿಷಯ ಸಹಿತ) ಈಗಾಗಲೇ ಈ 935 ಗ್ರಾಮ ಸಹಿತ ರಾಜ್ಯದ ಎಲ್ಲಾ ಗ್ರಾಮೀಣ ಭಾಗದಲ್ಲಿ ಈ ಯೋಜನೆ ಗ್ರಾಮ ಪಂಚಾಯತಿ ಹಾಗೂ ಅನುಷ್ಠಾನ ಇಲಾಖೆ ಮೂಲಕ ಅನುಷ್ಠಾನಿಸಲಾಗುತ್ತಿದೆ. ಈ ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿ ಅಧ್ಯಾಯ 15ರಲ್ಲಿ ಒಗ್ಗೂಡಿಸುವಿಕೆ ಕುರಿತು ವಿವರಣೆ ನೀಡಲಾಗಿದೆ. ಅದೇ ರೀತಿ ಮಾಸ್ಟರ್ ಸರ್ಕ್ಯೂಲರ್ 2016ರಲ್ಲಿ ಸಹ ಒಗ್ಗೂಡಿಸುವಿಕೆ ಬಗ್ಗೆ ವಿವರಿಸಲಾಗಿದೆ. ಈಗಾಗಲೇ, ಈ ಕುರಿತು ಹಲವಾರು ಸುತ್ತೋಲೆಗಳನ್ನು ಹೊರಡಿಸಲಾಗಿದೆ.

ಸನ್ಮಾನ್ಯ ಮುಖ್ಯ ಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ 13 ಅಂಶಗಳಿಗೆ ಅವಕಾಶ ಕಲ್ಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಇದೇ ತೆರನಾದ ಕಾಮಗಾರಿಗಳಿಗೆ ಗ್ರಾಮ ವಿಕಾಸ ಪುಟ ಸಂಖ್ಯೆ 26, 27ರಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಎರಡೂ ಯೋಜನೆಗಳ ಒಗ್ಗೂಡಿಸುವಿಕೆಯ ಮೂಲಕ ಸಮಗ್ರ ಗ್ರಾಮಗಳ ಅಭಿವೃದ್ಧಿಗೆ ಅಗತ್ಯ ಕಾಮಗಾರಿ ತೆಗೆದುಕೊಳ್ಳಲು ಈ ಮೂಲಕ ಅವಕಾಶ ಕಲ್ಪಿಸಿದೆ. ಇದಲ್ಲದೇ ಅನುಸೂಚಿ Iರ ಕಂಡಿಕೆ (4)ರಡಿ ಪ್ರವರ್ಗ 'ಎ' ರಿಂದ 'ಡಿ'ವರೆಗೆ ಎಲ್ಲಾ ಕಾಮಗಾರಿಗಳನ್ನು ಒಗ್ಗೂಡಿಸುವಿಕೆಯಡಿ ತೆಗೆದುಕೊಳ್ಳಬಹುದು. ಕೂಲಿ ಬಾಬತ್ತು ನರೇಗಾದಡಿ ಮತ್ತು ಅದಕ್ಕೆ ಅನುಗುಣವಾಗಿ ಶೇ 40ರ ಅನುಪಾತದ ಸಾಮಗ್ರಿಗಳ ವೆಚ್ಚ ನರೇಗಾದಡಿ ಭರಿಸಬಹುದು. ಉಳಿದ ಸಾಮಗ್ರಿ ಬಾಬತ್ತಿನ ಮೊತ್ತವನ್ನು ಗ್ರಾಮ ವಿಕಾಸ ಯೋಜನೆಯಡಿ ಭರಿಸುವುದು.
~~~~~

ಮಾನ್ಯ ಸಚಿವರು ನಿರ್ದೇಶಿಸಿರುತ್ತಾರೆ.

ಈ ಎರಡೂ ಯೋಜನೆಯ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ದಾಖಲೆ ಹಾಗೂ ಲೆಕ್ಕ ಪತ್ರಗಳನ್ನು ನಿರ್ವಹಿಸುವುದು. ಗ್ರಾಮ ಸಭೆಯ ಮೂಲಕ ಅರ್ಹ ಕಾಮಗಾರಿ ಆಯ್ಕೆ ಮಾಡಿಕೊಂಡು ಸಮಗ್ರವಾಗಿ ಅಂದಾಜು ಪಟ್ಟಿ ತಯಾರಿಸಿ, ನರೇಗಾದಡಿ ಮತ್ತು ಗ್ರಾಮ ವಿಕಾಸ ಯೋಜನೆಯಲ್ಲಿ ತೆಗೆದುಕೊಳ್ಳಬಹುದಾದ ಬಾಬತ್ತುಗಳನ್ನು ವಿಂಗಡಿಸಿಕೊಳ್ಳುವುದು. ಕಾಮಗಾರಿಗಳನ್ನು ಉದ್ಯೋಗ ಚೀಟಿ ಹೊಂದಿದ ಅಕುಶಲ ಕಾರ್ಮಿಕರಿಂದ ಅನುಷ್ಠಾನಿಸತಕ್ಕದ್ದು, ಮಾನವ ಅಕುಶಲ ಕೆಲಸಗಳನ್ನು ನಿರ್ವಹಿಸಬಹುದಾದ ಕಾಮಗಾರಿಗಳಿಗೆ ಯಂತ್ರಗಳನ್ನು ಬಳಸುವಂತಿಲ್ಲ, ಗುತ್ತಿಗೆದಾರರ ಮೂಲಕ ಕಾಮಗಾರಿ ನಿರ್ವಹಣೆ ನಿಷೇಧಿತವಾಗಿದೆ. ಇಂತಹ ಕಾಮಗಾರಿಗಳು ಸಾಮಾಜಿಕ ಪರಿಶೋಧನೆ, SQM/DQM ಪರಿವೀಕ್ಷಣೆ ಮತ್ತು ಓಂಬುಡ್ಸ್‌ಮನ್ ವ್ಯವಸ್ಥೆಗೆ ಒಳಪಟ್ಟಿರುತ್ತವೆ.

ಅಡಕಗಳು: ಮೇಲಿನಂತೆ

ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
   ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
2. ಜಿಲ್ಲಾ ಪಂಚಾಯತಿಗಳ ಮಟ್ಟದಲ್ಲಿ ನರೇಗಾ ಯೋಜನೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿರುವ ಅನುಷ್ಠಾನ ಇಲಾಖೆಗಳ ಅಧಿಕಾರಿಗಳಿಗೆ. (ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರ ಮುಖಾಂತರ)

ಪ್ರತಿಯನ್ನು:

1. ಮಹಾಲೇಖಪಾಲರು, ಲೆಕ್ಕಪತ್ರ ಕರ್ನಾಟಕ, ಬೆಂಗಳೂರು.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ನಿರ್ದೇಶಕರು, ಸುವರ್ಣ ಗ್ರಾಮೋದಯ ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿಯವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು-570011.
5. ಶ್ರೀವೈ.ಮಹಾಂಕಾಳಪ್ಪ, ಸಂಪಾದಕರು, ಕರ್ನಾಟಕ ವಿಕಾಸ ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳವರ ಮಾಹಿತಿಗಾಗಿ ಹಾಗೂ ಇದನ್ನು ಕರ್ನಾಟಕ ವಿಕಾಸದಲ್ಲಿ ಪ್ರಕಟಿಸಲು ಕೋರಿಕೆ.
6. M/s Effia Technologies ಅವರಿಗೆ www.end2endsolutions.com ನಲ್ಲಿ ಪ್ರಕಟಿಸಲು/ಅಳವಡಿಸಲು ಕೋರಿದೆ.